೨) ವಿಧವೆಯು ೧೮ ವರ್ಷ ವಯಸ್ಸನ್ನು ದಾಟಿದವಳಾಗಿದ್ದು ಅವಳು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿದ್ದು ಹಣದ ಸಹಾಯದ ಅವಶ್ಯಕತೆ ಇರಬೇಕು.

೩) ವಿಧವಾ ಮಹಿಳೆಯು ಅಂಗವಿಕಲರ ಪೋಷಣಾ ಭತ್ಯದ ಯೋಜನೆಯಡಿಯಲ್ಲಿ ಅಥವಾ ಇನ್ನೂ ಬೇರೆ ಯೋಜನೆಯಡಿಯಲ್ಲಿ ಫಲಾನುಭವಿಯಾಗಿದ್ದಲ್ಲಿ ಅಂತಹ ಮಹಿಳೆಯು ವಿಧವಾ ವೇತನವನ್ನು ಪಡೆಯಲು ಅರ್ಹಳಲ್ಲ.

೪) ಈ ಯೋಜನೆಯಡಿಯಲ್ಲಿ ಸಿಗುವ ಭತ್ಯವನ್ನು ವಿಧವಾ ಮಹಿಳೆಯು ತನ್ನ ಅಂತ್ಯಕಾಲದವರೆಗೆ ಅಥವಾ ಮತ್ತೊಮ್ಮೆ ವಿವಾಹವಾಗುವವರೆಗೆ ಅಥವಾ ವಾರ್ಷಿಕ ಪರಮಾನವು ರೂ.೧,೫೦೦ಕ್ಕೆ ಏರುವಂತಹ ಉದ್ಯೋಗ ಸಿಗುವವರೆಗೆ ಪಡೆಯಲು ಅರ್ಹಳಾಗಿರುತ್ತಾಳೆ.

೫) ಅರ್ಜಿದಾರಳು ಅಥವಾ ಆಕೆಯ ಗತಿಸಿದ ಪತಿಯು ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕೆ ಹಿಂದಿನ ಮೂರು ವರ್ಷಗಳಿಂದ ಈ ರಾಜ್ಯದ ನಿವಾಸಿಯಾಗಿರಬೇಕು.

೬) ಒಂದು ವೇಳೆ ಒಂದೇ ಮನೆತನದಲ್ಲಿ ಒಬ್ಬರಿಗಿಂತ ಹೆಚ್ಚು ನಿರ್ಗತಿಕ ವಿಧವೆಯರು ಇದ್ದಲ್ಲಿ ಅವರುಗಳೆಲ್ಲರೂ ಈ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ,

ಅ) ನಿಯಮಾವಳಿಗೆ ಬದ್ಧವಾಗಿರು ಎಲ್ಲಾ ಅರ್ಜಿಗಳಿಗೂ ಕಾನೂನಿನ ಪ್ರಕಾರ ವೇತನವನ್ನು ಮಂಜೂರು ಮಾಡಲಾಗುವುದು. ಒಂದು ವೇಳೆ ಅರ್ಹ ಅಭ್ಯರ್ಥಿಗಳ ಅರ್ಜಿಗಳು ತಿರಸ್ಕೃತವಾಗಿವೆ ಎಂದು ದೂರು ಬಂದರೆ ಅಂತಹ ಅರ್ಜಿಗಳನ್ನು ಮರುಪರಿಶೀಲಿಸಲಾಗುವುದು.

ಇ) ಅಂತಹ ಯಾವುದೇ ದೂರುಗಳು ಸ್ವೀಕೃತವಾಗಿಲ್ಲದ ಕಾರಣ ಜಿಲ್ಲಾವಾರು ಮಾಹಿತಿಯನ್ನು ಒದಗಿಸಲಾಗಿಲ್ಲ.

ಘಟಪ್ರಭಾ ಬಲದಂಡೆ ಕಾಲುವೆ.

೬೩೦. ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಜಲಾಸಂಪನ್ಮೂಲ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಪ್ರಭಾ ಬಲದಂಡೆ ಕಾಲುವೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು?

ಆ) ಸದರಿ ಕಾಲುವೆಯಿಂದ ರೈತರಿಗೆ ನೀರನ್ನು ಯಾವಾಗ ಒದಗಿಸಲಾಗುವುದು.

ಇ) ಮೇಲಿನ ಯೋಜನೆಯನ್ನು ಪೂರ್ಣಗೊಳಿಸಲು ತಗಲಬಹುದಾದ ಹಣದ ಮೊತ್ತವೆಷ್ಟು?

ಈ) ಈ ವರ್ಷ ಘಟಪ್ರಭಾ ಯೋಜನೆಗೆ ಕಡಿಮೆ ಹಣವನ್ನು ನೀಡಿರಲು ಕಾರಣಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸಲು ಯೋಚಿಸಲಾಗಿದೆ.

ಆ) ೧೯೮೪–೮೫ರಲ್ಲಿ ೧೨೯ ಹೆಕ್ಟೇರು ಪ್ರದೇಶಕ್ಕೆ ಅಗಲೇ ಒದಗಿಸಲಾಗಿದೆ. ಕಾಲುವೆ ಪೂರ್ಣಗೊಂಡಂತೆ ಮುಂದಿನ ಪ್ರದೇಶಗಳಿಗೆ ನೀರು ಬಿಡಲಾಗುವುದು.

ಇ) ಬಲದಂಡೆ ಕಾಲುವೆಯನ್ನು ಪೂರ್ಣಗೊಳಿಸಲು ತಗಲಬಹುದಾದ ವೆಚ್ಚ ೧೬೩ ಕೋಟಿ ರೂ.ಗಳು

ಈ) ಕಳೆದ ವರ್ಷ (೧೯೮೪–೮೫)ದಷ್ಟೇ ಈ ವರ್ಷವೂ (೧೯೮೫–೮೬) ಹಣವನ್ನು ಒದಗಿಸಲಾಗಿದೆ.